

بسم اللهِ الرّحمٰنِ الرّحيم

# ಹಝ್ರತ್ ಪೈಗಂಬರ್(ಸ)ರ ಅದ್ವಿತೀಯ ಕೃತಜ್ಞತಾ ಭಾವ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **17–07–2026** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ.

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ ـ بِسْمِ اللّٰهِ الرَّحْمٰنِ الرَّحِيْمِ.

اَلْحَمْدُ لِلّٰهِ رَبِّ الْعَالَمِيْنَ. اَلرَّحْمٰنِ الرَّحِيْمِ. مٰلِكِ يَوْمِ الدِّيْنِ. إِيَّاكَ نَعْبُدُ وَإِيَّاكَ نَسْتَعِيْنُ.

اِهْدِنَا الصِّرَاطَ الْمُسْتَقِيْمَ. صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ.

*(ತಶಹ್ಹುದ್, ತಅವ್ವುಧ್, ಸೂರತುಲ್ ಫಾತಿಹ ಪಠಿಸಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್, ಹೀಗೆ ಹೇಳಿದರು:)*

ಅಲ್ಲಾಹನು ಮನುಷ್ಯನನ್ನು ಸೃಷ್ಟಿಸುವುದಕ್ಕೂ ಮುನ್ನವೇ ಅವನ ಪ್ರಯೋಜನಕ್ಕಾಗಿ ಅಸಂಖ್ಯಾತ ಅನುಗ್ರಹಗಳನ್ನು ಉಂಟುಮಾಡಿದನು. ಅಲ್ಲಾಹನ ಈ ಕೃಪೆಗಾಗಿ ಖಂಡಿತವಾಗಿಯೂ ದಾಸನು ಅವನಿಗೆ ಕೃತಜ್ಞತೆ ಸಲ್ಲಿಸಬೇಕಾಗುವುದು. 'ಅಲ್ಲಾಹನ ಕೃತಜ್ಞ ದಾಸರಾಗಿರಿ' ಎಂದು ಪ್ರತಿಯೊಬ್ಬ ಪ್ರವಾದಿಯೂ ತಮ್ಮ ಅನುಯಾಯಿಗಳಿಗೆ ಉಪದೇಶಿಸಿದ್ದರು. ಎಲ್ಲಕ್ಕಿಂತ ಮಿಗಿಲಾಗಿ ಕೃತಜ್ಞತೆಯ ಮಾದರಿಯನ್ನು ನಮ್ಮ ನಾಯಕರಾದ ಹಝ್ರತ್ ಮುಹಮ್ಮದ್ ಪೈಗಂಬರ್(ಸ) ತೋರಿಸಿಕೊಟ್ಟರು.

ಇಂದು ಹಝ್ರತ್ ಪೈಗಂಬರ್(ಸ)ರ ಇದೇ ಮಾದರಿ, ಪ್ರಾರ್ಥನೆಗಳು ಮತ್ತು ವಿಧಾನಗಳ ಕುರಿತು ಪ್ರಸ್ತಾಪಿಸಲಿದ್ದೇನೆ. ಒಂದು ವರದಿಯಲ್ಲಿ ಬರುವಂತೆ, ರಸೂಲುಲ್ಲಾಹ್(ಸ) ಹೀಗೆ ಹೇಳಿದರು: 'ಸತ್ಯವಿಶ್ವಾಸವು ಎರಡು ಭಾಗಗಳನ್ನು ಹೊಂದಿದೆ. ಅರ್ಧದಷ್ಟು ತಾಳ್ಮೆಯಲ್ಲಿದೆ ಮತ್ತು ಉಳಿದರ್ಧ ಕೃತಜ್ಞತೆಯಲ್ಲಿದೆ.'

(ಹುಝೂರ್ ಹೇಳಿದರು:) ತಾಳ್ಮೆಯು ಕೂಡ ಕೃತಜ್ಞತೆಯ ಒಂದು ಭಾಗವೇ ಆಗಿದೆ ಎಂದು ತಿಳಿದುಬರುತ್ತದೆ. ನಬಿ(ಸ) ಹೀಗೆ ಹೇಳಿದರು: 'ಸತ್ಯವಿಶ್ವಾಸಿಯ ವಿಷಯವು ಸಂಪೂರ್ಣವಾಗಿ ಒಳಿತಾಗಿದೆ. ಇದು ಸತ್ಯವಿಶ್ವಾಸಿಯನ್ನು ಹೊರತುಪಡಿಸಿ ಬೇರೆ ಯಾರಿಗೂ ಇಲ್ಲ. ಅವನಿಗೆ ಏನಾದರೂ ಸಂತೋಷ ಉಂಟಾದರೆ ಅವನು ಕೃತಜ್ಞತೆ ಸಲ್ಲಿಸುತ್ತಾನೆ; ಅದು ಅವನಿಗೆ ಒಳಿತಾಗಿದೆ. ಅವನಿಗೆ ಯಾವುದಾದರೂ ಸಂಕಷ್ಟ ಎದುರಾದರೆ ಅವನು ತಾಳ್ಮೆ ವಹಿಸುತ್ತಾನೆ; ಅದು ಕೂಡ ಅವನಿಗೆ ಒಳಿತಾಗಿದೆ.'

ರಸೂಲುಲ್ಲಾಹ್(ಸ) ಹೇಳಿದರು: 'ಯಾರು ಜನರಿಗೆ ಕೃತಜ್ಞತೆ ಸಲ್ಲಿಸುವುದಿಲ್ಲವೋ, ಅವನು ದೇವನಿಗೂ ಕೃತಜ್ಞತೆ ಸಲ್ಲಿಸುವುದಿಲ್ಲ.' ಅಲ್ಲಾಹನಿಗೆ ಕೃತಜ್ಞರಾಗಿರುವುದರ ಜೊತೆಗೆ ದಾಸರಿಗೂ ಕೃತಜ್ಞರಾಗಿರಬೇಕು ಎಂದು ನಬಿ(ಸ) ಆದೇಶಿಸಿದ್ದಾರೆ. ಇದನ್ನು ಪಾಲಿಸಿದರೆ ನೈಜ ಇಸ್ಲಾಮಿಕ ಸಮಾಜವು ಸ್ಥಾಪನೆಯಾಗಲು ಸಾಧ್ಯ.

ಹಝ್ರತ್ ನುಅ್‌ಮಾನ್ ಬಿನ್ ಬಶೀರ್(ರ)ರಿಂದ ವರದಿಯಾಗಿದೆ, ಪ್ರವಾದಿ(ಸ) ಹೀಗೆ ಹೇಳಿದರು: 'ಯಾರು ಸ್ವಲ್ಪದರಲ್ಲಿ ಕೃತಜ್ಞತೆ ಸಲ್ಲಿಸುವುದಿಲ್ಲವೋ, ಅವನು ಹೆಚ್ಚಿನದರಲ್ಲೂ ಕೃತಜ್ಞನಾಗಿರುವುದಿಲ್ಲ. ಅಲ್ಲಾಹನ ಅನುಗ್ರಹಗಳನ್ನು ಪ್ರಸ್ತಾಪಿಸುವುದು ಕೂಡ ಕೃತಜ್ಞತೆಯಾಗಿದೆ.' ನಬಿ(ಸ) ಹೇಳಿದರು: 'ಒಗ್ಗಟ್ಟಾಗಿರುವುದು ಕರುಣೆಯಾಗಿದೆ ಮತ್ತು ಒಡಕು ಶಾಪವಾಗಿದೆ.'

ಹಝ್ರತ್ ಉಸಾಮಾ ಬಿನ್ ಝೈದ್(ರ) ವಿವರಿಸುತ್ತಾರೆ: ರಸೂಲುಲ್ಲಾಹ್(ಸ) ಹೇಳಿದರು, 'ಯಾರಿಗಾದರೂ ಯಾವುದಾದರೂ ಉಪಕಾರ ಲಭಿಸಿದಾಗ, ಅವನು ಅದನ್ನು ಮಾಡಿದವನಿಗೆ 'ಜಝಾಕಲ್ಲಾಹು ಖೈರನ್' (ಅಲ್ಲಾಹನು ನಿನಗೆ ಉತ್ತಮ ಪ್ರತಿಫಲ ನೀಡಲಿ) ಎಂದು ಹೇಳಿದರೆ, ಅವನು ಹೊಗಳಿಕೆಯ ಹಕ್ಕನ್ನು ಪೂರೈಸಿದನು.' ನಬಿ(ಸ) ಹೇಳಿದರು: 'ಅಲ್ಲಾಹನು ಯಾವುದಾದರೂ ಸಮುದಾಯಕ್ಕೆ ಒಳಿತು ಮತ್ತು ಸಮೃದ್ಧಿಯನ್ನು ದಯಪಾಲಿಸಲು ಇಚ್ಛಿಸಿದರೆ, ಅವರ ಆಯಸ್ಸನ್ನು ಹೆಚ್ಚಿಸುತ್ತಾನೆ ಮತ್ತು ಕೃತಜ್ಞತೆ ಸಲ್ಲಿಸುವ ಸೌಭಾಗ್ಯವನ್ನು ಕರುಣಿಸುತ್ತಾನೆ.'

ರಸೂಲುಲ್ಲಾಹ್(ಸ) ಹಝ್ರತ್ ಮುಆಝ್ ಬಿನ್ ಜಬಲ್(ರ)ರ ಕೈ ಹಿಡಿದು ಹೇಳಿದರು: 'ಹೇ ಮುಆಝ್, ದೇವನಾಣೆ, ನಾನು ನಿನ್ನನ್ನು ಪ್ರೀತಿಸುತ್ತೇನೆ. ನಾನು ನಿನಗೆ ತಾಕೀತು ಮಾಡುತ್ತೇನೆ, ನೀನು ಪ್ರತಿಯೊಂದು ನಮಾಝಿನ ನಂತರ ಇದನ್ನು ಹೇಳುವುದನ್ನು ಎಂದಿಗೂ ಬಿಡಬೇಡ: 'ಹೇ ಅಲ್ಲಾಹ್, ನಿನ್ನ ಸ್ಮರಣೆಗಾಗಿ, ನಿನ್ನ ಕೃತಜ್ಞತೆಗಾಗಿ ಮತ್ತು ನಿನ್ನನ್ನು ಅತ್ಯುತ್ತಮವಾಗಿ ಆರಾಧಿಸಲಿಕ್ಕಾಗಿ ನನಗೆ ಸಹಾಯ ಮಾಡು'.'

ಒಂದು ವರದಿಯಲ್ಲಿದೆ, ನಬಿ(ಸ) ಸಹಾಬಿಯರಿಗೆ ಈ ಪ್ರಾರ್ಥನೆಯನ್ನು ಕಲಿಸಿದರು: 'ಹೇ ಅಲ್ಲಾಹ್, ನಾನು ಪ್ರತಿಯೊಂದು ಕಾರ್ಯದಲ್ಲೂ ನಿನ್ನಿಂದ ಸ್ಥಿರತೆಯನ್ನು ಬೇಡುತ್ತೇನೆ ಮತ್ತು ನಿನ್ನಿಂದ ಮಾರ್ಗದರ್ಶನದ ದೃಢತೆಯನ್ನು ಬೇಡುತ್ತೇನೆ. ನಿನ್ನಿಂದ ನಿನ್ನ ಅನುಗ್ರಹದ ಕೃತಜ್ಞತೆಯನ್ನು ಬೇಡುತ್ತೇನೆ, ನಿನ್ನ ಆರಾಧನೆಯ ಸೌಂದರ್ಯವನ್ನು ಹಾಗೂ ನಿನ್ನೊಡನೆ ಸತ್ಯ ನುಡಿಯುವ

ನಾಲಿಗೆಯನ್ನು ಬೇಡುತ್ತೇನೆ. ಪರಿಶುದ್ಧ ಹೃದಯದೊಂದಿಗೆ ನಿನ್ನಲ್ಲಿ ಆಶ್ರಯ ಬೇಡುತ್ತೇನೆ; ನಿನಗೆ ತಿಳಿದಿರುವ ಕೆಡುಕಿನಿಂದ ಆಶ್ರಯ ಬೇಡುತ್ತೇನೆ, ನಿನಗೆ ತಿಳಿದಿರುವ ಒಳಿತನ್ನು ಬೇಡುತ್ತೇನೆ ಮತ್ತು ನಿನ್ನಿಂದ ಕ್ಷಮೆಯನ್ನು ಯಾಚಿಸುತ್ತೇನೆ.'

ನಮಾಝಿನಲ್ಲಿ ಮಾಡಲು ಯಾವ ಪ್ರಾರ್ಥನೆ ಅತ್ಯಂತ ಉತ್ತಮವಾಗಿದೆ ಎಂದು ಹಝ್ರತ್ ಪೈಗಂಬರ್(ಸ)ರೊಡನೆ ಕೇಳಲಾದಾಗ, ನಬಿ(ಸ) ಹೀಗೆ ಹೇಳಿದರು: 'ಹೇ ಅಲ್ಲಾಹ್, ಎಲ್ಲ ಪ್ರಶಂಸೆಗಳು ನಿನಗೆ ಸೇರಿವೆ, ಎಲ್ಲ ಕೃತಜ್ಞತೆಗಳೂ ನಿನಗೆ ಸೇರಿವೆ, ಎಲ್ಲ ಸಾಮ್ರಾಜ್ಯವು ನಿನಗೆ ಸೇರಿದೆ, ಎಲ್ಲ ಸೃಷ್ಟಿಯೂ ನಿನ್ನದಾಗಿದೆ. ಪ್ರತಿಯೊಂದು ವಿಷಯವೂ ನಿನ್ನ ಕಡೆಗೇ ಮರಳುತ್ತದೆ. ನಾವು ನಿನ್ನಿಂದ ಪ್ರತಿಯೊಂದು ವಿಧದ ಒಳಿತನ್ನು ಬೇಡುತ್ತೇವೆ ಮತ್ತು ಪ್ರತಿಯೊಂದು ಕೆಡುಕಿನಿಂದ ನಿನ್ನಲ್ಲಿ ಆಶ್ರಯ ಬೇಡುತ್ತೇವೆ.'

ನಬಿ(ಸ)ರ ಒಂದು ಪ್ರಾರ್ಥನೆ ಹೀಗೆ ಸಿಗುತ್ತದೆ: 'ಹೇ ನನ್ನ ಪ್ರಭೂ, ನನಗೆ ಸಹಾಯ ಮಾಡು ಮತ್ತು ನನ್ನ ವಿರುದ್ಧವಾಗಿ ಯಾರಿಗೂ ಸಹಾಯ ಮಾಡಬೇಡ. ನನಗೆ ನೆರವಾಗು ಮತ್ತು ನನ್ನ ಎದುರಾಗಿ ಯಾರಿಗೂ ನೆರವಾಗಬೇಡ. ನನಗಾಗಿ ತಂತ್ರ ರೂಪಿಸು ಮತ್ತು ನನ್ನ ವಿರುದ್ಧ ತಂತ್ರ ಮಾಡಬೇಡ. ನನಗೆ ಮಾರ್ಗದರ್ಶನ ನೀಡು ಮತ್ತು ನನಗಾಗಿ ನನ್ನ ಮಾರ್ಗದರ್ಶನವನ್ನು ಸುಲಭಗೊಳಿಸು. ನನ್ನ ಮೇಲೆ ದೌರ್ಜನ್ಯವೆಸಗಿದವರ ಎದುರಾಗಿ ನನಗೆ ಸಹಾಯ ಮಾಡು. ಹೇ ಅಲ್ಲಾಹ್, ನಿನಗೆ ಕೃತಜ್ಞತೆ ಸಲ್ಲಿಸುವವನಾಗಿ, ನಿನ್ನನ್ನು ಸ್ಮರಿಸುವವನನ್ನಾಗಿ, ನಿನ್ನನ್ನು ಭಯಪಡುವವನನ್ನಾಗಿ, ನಿನ್ನ ಆಜ್ಞಾಪಾಲಕನನ್ನಾಗಿ, ನಿನಗೆ ಅತಿ ಹೆಚ್ಚು ವಿಧೇಯನನ್ನಾಗಿ, ನಿನ್ನ ಕಡೆಗೆ ಅತಿ ಹೆಚ್ಚು ಬಾಗುವವನನ್ನಾಗಿ ಮಾಡು. ಹೇ ನನ್ನ ಪ್ರಭೂ, ನನ್ನ ಪಶ್ಚಾತ್ತಾಪವನ್ನು ಸ್ವೀಕರಿಸು, ನನ್ನ ಪ್ರಾರ್ಥನೆಯನ್ನು ಆಲಿಸು, ನನ್ನ ಸಾಕ್ಷ್ಯವನ್ನು ಸ್ವೀಕರಿಸು. ನನ್ನ ಹೃದಯಕ್ಕೆ ಮಾರ್ಗದರ್ಶನ ನೀಡು, ನನ್ನ ನಾಲಿಗೆಯನ್ನು ನೇರಗೊಳಿಸು, ಮತ್ತು ನನ್ನ ಹೃದಯದಿಂದ ಹಗೆಯನ್ನು ದೂರಮಾಡು.'

ಮತ್ತೊಂದು ಪ್ರಾರ್ಥನೆಯಿದೆ: 'ಹೇ ಅಲ್ಲಾಹ್, ನನ್ನನ್ನು ನಿನಗೆ ಅತಿ ಹೆಚ್ಚು ಕೃತಜ್ಞತೆ ಸಲ್ಲಿಸುವವನನ್ನಾಗಿ, ನಿನ್ನನ್ನು ಹೆಚ್ಚಾಗಿ ಸ್ಮರಿಸುವವನನ್ನಾಗಿ, ನಿನ್ನ ಉಪದೇಶವನ್ನು ಅನುಸರಿಸುವವನನ್ನಾಗಿ ಮತ್ತು ನಿನ್ನ ಕಟ್ಟುನಿಟ್ಟಾದ ಆಜ್ಞೆಗಳನ್ನು ನೆನಪಿನಲ್ಲಿಟ್ಟುಕೊಳ್ಳುವವನನ್ನಾಗಿ ಮಾಡು.'

(ಹುಝೂರ್ ಹೇಳಿದರು:) ಮನುಷ್ಯನು ಈ ಪ್ರಾರ್ಥನೆಯನ್ನು ಪ್ರತಿದಿನ ಮಾಡಿದರೆ ತಪ್ಪು ಆಲೋಚನೆಗಳು ಹುಟ್ಟಿಕೊಳ್ಳದು ಮತ್ತು ಮನುಷ್ಯನು ತಪ್ಪು ಕೆಲಸಗಳನ್ನೂ ಮಾಡಲಾರನು.

ಹಝ್ರತ್ ಪೈಗಂಬರ್(ಸ) ಮತ್ತು ಅವರ ಸಹಾಬಿಯರು ಮಳೆಯ ಮೊದಲ ಹನಿಗಳನ್ನು ತಮ್ಮ ತಲೆಯ ಮೇಲೆ ಬೀಳಿಸಿಕೊಳ್ಳುತ್ತಿದ್ದರು ಮತ್ತು ನಬಿ(ಸ) ಹೇಳುತ್ತಿದ್ದರು: 'ಇದು ನಮ್ಮ ಅತ್ಯುನ್ನತನಾದ ಪ್ರಭುವಿನ ಕಡೆಯಿಂದ ಬಂದಿರುವ ತಾಜಾ ಅನುಗ್ರಹವಾಗಿದೆ.' ಹೀಗೆ ಮಳೆ ಬರುವಾಗಲೂ ಕೃತಜ್ಞತೆ ಸಲ್ಲಿಸುತ್ತಿದ್ದರು.

ಶೌಚಾಲಯದಿಂದ ಹೊರಬರುವಾಗ ಹಝ್ರತ್ ಪೈಗಂಬರ್(ಸ) ಈ ಪ್ರಾರ್ಥನೆ ಮಾಡುತ್ತಿದ್ದರು: 'ನನಗೆ ಹಾನಿಯುಂಟುಮಾಡುವ ವಸ್ತುವನ್ನು ನನ್ನಿಂದ ದೂರಮಾಡಿ ನನಗೆ ಆರೋಗ್ಯವನ್ನು ಕರುಣಿಸಿದ ಆ ಅಲ್ಲಾಹನಿಗೆ ಎಲ್ಲ ಪ್ರಶಂಸೆಗಳು ಸಲ್ಲುತ್ತವೆ.'

ರಾತ್ರಿ ತಮ್ಮ ಹಾಸಿಗೆಯಲ್ಲಿ ಮಲಗುವಾಗ ಈ ಪ್ರಾರ್ಥನೆ ಮಾಡುತ್ತಿದ್ದರು: 'ಹೇ ಅಲ್ಲಾಹ್, ನಿನ್ನ ಹೆಸರಿನಿಂದಲೇ ನಾನು ಮರಣಪಡುತ್ತೇನೆ ಮತ್ತು ಜೀವಿಸುತ್ತೇನೆ.' ಎಚ್ಚರಗೊಳ್ಳುವಾಗ ಹೀಗೆ ಪ್ರಾರ್ಥಿಸುತ್ತಿದ್ದರು: 'ನಮ್ಮನ್ನು ಮೃತಪಡಿಸಿದ ನಂತರ ಪುನಃ ಜೀವಂತಗೊಳಿಸಿದ ಅಲ್ಲಾಹನಿಗೆ ಎಲ್ಲ ಪ್ರಶಂಸೆಗಳು ಸಲ್ಲುತ್ತವೆ ಮತ್ತು ನಾವು ಅವನ ಕಡೆಗೇ ಹಿಂತಿರುಗಿ ಹೋಗಬೇಕಾಗಿದೆ.'

ನಬಿ(ಸ) ಊಟ ಮಾಡುವಾಗ ಅಲ್ಲಾಹನಿಗೆ ಕೃತಜ್ಞತೆ ಸಲ್ಲಿಸುತ್ತಿದ್ದರು, ಹೊಸ ಬಟ್ಟೆ ಧರಿಸುವಾಗ ಅಲ್ಲಾಹನಿಗೆ ಕೃತಜ್ಞತೆ ಸಲ್ಲಿಸುತ್ತಿದ್ದರು; ಒಟ್ಟಿನಲ್ಲಿ ನಬಿ(ಸ) ಅಲ್ಲಾಹನಿಗೆ ಕೃತಜ್ಞತೆ ಸಲ್ಲಿಸದ ಮತ್ತು ಅವನನ್ನು ಸ್ತುತಿಸದ ಯಾವುದೇ ಸಂದರ್ಭವಿರಲಿಲ್ಲ.

ಹಝ್ರತ್ ಪೈಗಂಬರ್(ಸ)ರ ಮುಂದೆ ಒಬ್ಬ ವ್ಯಕ್ತಿ ಬಂದನು, ಅವನ ಕೂದಲುಗಳು ಅಸ್ತವ್ಯಸ್ತವಾಗಿದ್ದವು. ನಬಿ(ಸ) ಹೇಳಿದರು: 'ತನ್ನ ಕೂದಲುಗಳನ್ನು ಸರಿಪಡಿಸಿಕೊಳ್ಳಲು ಇವನಿಗೆ ಏನೂ ಸಿಗುವುದಿಲ್ಲವೇ?' ಮಲಿನವಾದ ಬಟ್ಟೆಗಳನ್ನು ಧರಿಸಿದ್ದ ಮತ್ತೊಬ್ಬನನ್ನು ನಬಿ(ಸ) ನೋಡಿದಾಗ ಹೇಳಿದರು: 'ತನ್ನ ಬಟ್ಟೆಗಳನ್ನು ತೊಳೆಯಲು ಇವನಿಗೆ ನೀರು ಸಿಗುವುದಿಲ್ಲವೇ?'

ನಬಿ(ಸ) ಹೇಳಿದರು: 'ಯಾರ ಹೃದಯದಲ್ಲಿ ಸಾಸಿವೆ ಕಾಳಿನಷ್ಟಾದರೂ ಅಹಂಕಾರವಿದೆಯೋ, ಅವನು ಸ್ವರ್ಗವನ್ನು ಪ್ರವೇಶಿಸಲಾರನು.' ಒಬ್ಬ ವ್ಯಕ್ತಿ ವಿನಂತಿಸಿದನು: 'ಮನುಷ್ಯನು ತನ್ನ ಉಡುಪು ಚೆನ್ನಾಗಿರಬೇಕು, ತನ್ನ ಚಪ್ಪಲಿ ಚೆನ್ನಾಗಿರಬೇಕು ಎಂದು ಬಯಸುತ್ತಾನೆ.' ನಬಿ(ಸ) ಹೇಳಿದರು: 'ಅಲ್ಲಾಹನು ಸುಂದರನಾಗಿದ್ದಾನೆ ಮತ್ತು ಸೌಂದರ್ಯವನ್ನು ಇಷ್ಟಪಡುತ್ತಾನೆ. ಅಹಂಕಾರವೆಂದರೆ, ತನ್ನನ್ನು ತಾನು ದೊಡ್ಡವನೆಂದು ಭಾವಿಸಿ ಸತ್ಯವನ್ನು ನಿರಾಕರಿಸುವುದು ಮತ್ತು ಜನರನ್ನು ಕೀಳಾಗಿ ಕಾಣುವುದಾಗಿದೆ ಎಂಬುದರಲ್ಲಿ ಸಂದೇಹವಿಲ್ಲ.'

ಬದ್ರ್ ಯುದ್ಧದ ಸಂದರ್ಭದಲ್ಲಿ ಸತ್ಯನಿಷೇಧಿಯರ ವಿನಾಶ ಮತ್ತು ದೇವನ ಕಡೆಯಿಂದ ಲಭಿಸಿದ ವಿಜಯಕ್ಕಾಗಿ ನಬಿ(ಸ) ಅಲ್ಲಾಹನಿಗೆ ಕೃತಜ್ಞತೆ ಸಲ್ಲಿಸಿದರು. ಅದೇ ರೀತಿ ಮಕ್ಕಾ ವಿಜಯದ ಸಂದರ್ಭದಲ್ಲೂ ನಬಿ(ಸ)ರ ಕೃತಜ್ಞತೆಯ ದುಆಗಳ ಉಲ್ಲೇಖ ಸಿಗುತ್ತದೆ. ಈ ಸಂದರ್ಭದಲ್ಲಿ ನಬಿ(ಸ) ಹಝ್ರತ್ ಉಮ್ಮೆ ಹಾನಿ(ರ)ರ ಮನೆಯಲ್ಲಿ ಎಂಟು ರಕಅತ್ 'ಝುಹಾ' ನಮಾಝ್ ನಿರ್ವಹಿಸಿದರು.

ಹಜ್ಜತುಲ್ ವಿದಾ ಸಂದರ್ಭದಲ್ಲಿ ಹಝ್ರತ್ ಪೈಗಂಬರ್[ಸ]ರ ಒಂದು ದುಆದ ಉಲ್ಲೇಖ ಹೀಗೆ ಸಿಗುತ್ತದೆ: 'ಅಲ್ಲಾಹನ ಹೊರತು ಆರಾಧನೆಗೆ ಅರ್ಹರು ಬೇರಾರೂ ಇಲ್ಲ. ಅವನು ಏಕನು, ಅವನಿಗೆ ಪಾಲುಗಾರರು ಯಾರೂ ಇಲ್ಲ. ಸಾಮ್ರಾಜ್ಯವು ಅವನದೇ, ಪ್ರಶಂಸೆಯೂ ಅವನಿಗೇ. ಅವನು ಪ್ರತಿಯೊಂದು ವಸ್ತುವಿನ ಮೇಲೂ ಶಕ್ತನಾಗಿದ್ದಾನೆ. ಅಲ್ಲಾಹನ ಹೊರತು ಆರಾಧನೆಗೆ ಅರ್ಹರು ಬೇರಾರೂ ಇಲ್ಲ. ಅವನು ತನ್ನ ವಾಗ್ದಾನವನ್ನು ಪೂರೈಸಿದನು ಮತ್ತು ತನ್ನ ದಾಸನಿಗೆ ಸಹಾಯ ಮಾಡಿದನು ಹಾಗೂ ವಿರೋಧಿ ಸೇನೆಯನ್ನು ಒಂಟಿಯಾಗಿ ಹಿಮ್ಮೆಟ್ಟಿಸಿದನು.'

ರಸೂಲುಲ್ಲಾಹ್[ಸ] ಹೇಳಿದರು: 'ಯಾರಲ್ಲಿ ಎರಡು ಗುಣಗಳಿವೆಯೋ, ಅಲ್ಲಾಹನು ಅವನನ್ನು ತಾಳ್ಮೆಯುಳ್ಳವನು ಮತ್ತು ಕೃತಜ್ಞನು ಎಂದು ಬರೆದುಕೊಳ್ಳುತ್ತಾನೆ. ಮೊದಲನೆಯದು: ತನ್ನ ಧರ್ಮದ ವಿಷಯದಲ್ಲಿ ತನಗಿಂತ ಉನ್ನತ ಮಟ್ಟದಲ್ಲಿರುವವನ ಕಡೆಗೆ ನೋಡಿ ಅವನನ್ನು ಅನುಸರಿಸುವುದು. ಎರಡನೆಯದು: ತನ್ನ ಪ್ರಾಪಂಚಿಕ ವಿಷಯದಲ್ಲಿ ತನಗಿಂತ ಕೀಳು ಮಟ್ಟದಲ್ಲಿರುವವನ ಕಡೆಗೆ ನೋಡಿ ಅಲ್ಲಾಹನಿಗೆ ಪ್ರಶಂಸೆ ಸಲ್ಲಿಸುವುದು.'

ನಬಿ[ಸ] ಹೇಳಿದರು: 'ನಿಮಗಿಂತ ಕೆಳಗಿರುವವರ ಕಡೆಗೆ ನೋಡು, ನಿಮಗಿಂತ ಮೇಲಿರುವವರ ಕಡೆಗೆ ನೋಡಬೇಡಿ. ನೀವು ಅಲ್ಲಾಹನ ಅನುಗ್ರಹವನ್ನು ತುಚ್ಛವಾಗಿ ಕಾಣದಿರಲು ಇದು ಹೆಚ್ಚು ಸೂಕ್ತವಾಗಿದೆ.' ನಬಿ[ಸ] ಹೇಳಿದರು: 'ನಾಲ್ಕು ವಸ್ತುಗಳನ್ನು ಯಾರಿಗೆ ನೀಡಲಾಗಿದೆಯೋ, ಅವನಿಗೆ ಇಹಲೋಕ ಮತ್ತು ಪರಲೋಕದ ಒಳಿತನ್ನು ನೀಡಲಾಯಿತು. ಅವುಗಳೆಂದರೆ: ಕೃತಜ್ಞತೆಯುಳ್ಳ ಹೃದಯ, ದೇವಸ್ಮರಣೆ ಮಾಡುವ ನಾಲಿಗೆ, ಪರೀಕ್ಷೆಯ ಸಮಯದಲ್ಲಿ ತಾಳ್ಮೆ ವಹಿಸುವ ದೇಹ, ಮತ್ತು ತನ್ನ ಪಾತಿವ್ರತ್ಯದ ವಿಷಯದಲ್ಲಿಯೂ ಪತಿಯ ವಿಷಯದಲ್ಲಿಯೂ ಅವನಿಗೆ ದ್ರೋಹ ಬಗೆಯದ ಪತ್ನಿ.'

ಹಝ್ರತ್ ಆಯಿಶ[ರ] ವಿವರಿಸುತ್ತಾರೆ: 'ನಬಿ[ಸ] ತಮ್ಮ ಎಲ್ಲ ಸಮಯಗಳಲ್ಲೂ ದೇವಸ್ಮರಣೆ ಮಾಡುತ್ತಿದ್ದರು.'

ಹಝ್ರತ್ ಪೈಗಂಬರ್[ಸ] ತಮ್ಮ ಉಮ್ಮತ್‌ನ ಮುಂದೆ ತಮ್ಮ ಕೃತಜ್ಞತೆಯ ಅತ್ಯುನ್ನತ ಮಾದರಿಗಳನ್ನು ಸ್ಥಾಪಿಸಿದ್ದಾರೆ ಮತ್ತು ನಮಗೂ ಕೃತಜ್ಞರಾಗಿರಲು ಉಪದೇಶಿಸಿದ್ದಾರೆ.

ಖುತ್ಬದ ಕೊನೆಯಲ್ಲಿ ಹುಝೂರ್ ಹೀಗೆ ಹೇಳಿದರು: ಮುಂದಿನ ಶುಕ್ರವಾರದಿಂದ ಅಹ್ಮದಿಯಾ ಮುಸ್ಲಿಮ್ ಜಮಾಅತ್ ಬ್ರಿಟನಿನ 'ಜಲ್ಸ ಸಾಲಾನಾ' ಸಹ ಪ್ರಾರಂಭವಾಗಲಿದೆ, ಇನ್‌ಶಾ ಅಲ್ಲಾಹ್. ಅಲ್ಲಾಹನು ಅದನ್ನು ಪ್ರತಿಯೊಂದು ರೀತಿಯಲ್ಲೂ ಅನುಗ್ರಹೀತಗೊಳಿಸಲಿ ಎಂದು ದುಆ ಮಾಡಿರಿ. ಪ್ರತಿಯೊಂದು ರೀತಿಯಲ್ಲೂ ತನ್ನ ಸಂರಕ್ಷಣೆಯಲ್ಲಿರಿಸಲಿ. ಹವಾಮಾನದ ತೀವ್ರತೆ ಮತ್ತು ಉಷ್ಣತೆಯ ಕಾರಣದಿಂದ ಕೆಲವು ಅಪಾಯಗಳೂ ಇವೆ. ಅಲ್ಲಾಹನು ಪ್ರತಿಯೊಂದು ರೀತಿಯಲ್ಲೂ ತನ್ನ ಆಶ್ರಯದಲ್ಲಿರಿಸಲಿ. ಡ್ಯೂಟಿ ಮಾಡುವ ಕಾರ್ಯಕರ್ತರಿಗೆ ಕೆಲವೊಮ್ಮೆ ಬಿಸಿಲಿನಲ್ಲಿ ನಿಂತು ಡ್ಯೂಟಿ ಮಾಡಬೇಕಾಗುತ್ತದೆ, ಕಠಿಣ ಡ್ಯೂಟಿಗಳೂ ಇರುತ್ತವೆ. ಅಲ್ಲಾಹನು ಅವರಿಗೂ ಅತ್ಯುತ್ತಮ ರೀತಿಯಲ್ಲಿ ತಮ್ಮ ಕರ್ತವ್ಯಗಳನ್ನು ಪೂರೈಸುವ ಸೌಭಾಗ್ಯವನ್ನು ಕರುಣಿಸಲಿ.

————————*****————————

اَلْحَمْدُلِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَاهَادِىَ لَهٗ ۔ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُ اَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَأْمُرُ بِالْعَدْلِ وَالْاِحْسَانِ وَاِيْتَاءِ ذِى الْقُرْبٰى
وَيَنْهٰى عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ٥ اُذْكُرُوا اللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.

***Friday Sermon delivered by Hadrath Khaleefatul Masih Al Khamis(atba)***

At, ***'Masjid Mubarak',*** *Islamabad, Tilford,* U.K. On 17-07-2026

**Summarized by** *Majlis Ansarullah Bharat*

***Kannada Translation:*** Moulavi Inamullah for Kannada Desk, Qadian

***Reviewed by:*** M.P Ibrahim | ***Layout:*** Basheer K.P. Manjeshwar

***Published By:*** Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon